ಒ ಎಸ್ 331/2025 ಪಿ.ಡಬ್ಲ್ಯೂ:1

ಇಂದು ದಿಃ 16.06.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 1 ಮತ್ತು 5ನೇ ಪ್ರತಿವಾದಿ ಪರ ಶ್ರೀ ಹೆಚ್ ಎನ್ ಎಂ ವಕೀಲರಿಂದಃ

ನನ್ನ ತಂದೆ ಮಾದಯ್ಯ 33 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಾವು 6 ಜನ ಮಕ್ಕಳು. 2ನೇ ಪ್ರತಿವಾದಿ ನನ್ನ ಅಣ್ಣ. ನನ್ನ ತಂದೆ ಮೃತಪಟ್ಟ ನಂತರ ನನ್ನ ಮದುವೆಯನ್ನು 1ನೇ ಪ್ರತಿವಾದಿ ಮಾಡಿಕೊಟ್ಟರು ಎಂದರೆ ನನ್ನ ಮದುವೆಯಾಗಿ 44 ವರ್ಷ ಆಗಿದೆ ಎನ್ನುತ್ತಾರೆ. ನನ್ನ ಗಂಡ ಸರ್ಕಾರಿ ಕೆಲಸದಲ್ಲಿದ್ದು ನಿವೃತ್ತಿಯಾಗಿದ್ದು ಈಗ ಆರೋಗ್ಯವಾಗಿದ್ದಾರೆ. ಒಟ್ಟು ಕುಟುಂಬದ ಆದಾಯದಿಂದ ನಮ್ಮೆಲ್ಲರ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಗಳು ನನ್ನ ತಂದೆಯ ತಂದೆ ಹೆಸರಿನಲ್ಲಿರುತ್ತದೆ. 3ನೇ ದಾವಾ ಆಸ್ತಿಯ ವಿಸ್ತೀರ್ಣ ಗೊತ್ತಿಲ್ಲ. 1ನೇ ಪ್ರತಿವಾದಿಯನ್ನು ನಾನು ಯಾವತ್ತೂ ಭಾಗ ಬೇಕು ಎಂದು ಕೇಳಿಲ್ಲ ಎಂದರೆ ಸರಿಯಲ್ಲ, ನಾನು ನೊಟೀಸ್ ಕಳುಹಿಸಿದ್ದೇನೆ. ನನ್ನ ತಾತನ ಹೆಸರಿನಲ್ಲಿರುವ 12 ಗುಂಟೆ ಜಮೀನು ಬಿಟ್ಟು ಬೇರೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ನಮ್ಮ ಮದುವೆಯನ್ನು 1ನೇ ಪ್ರತಿವಾದಿ ಮಾಡಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆಯವರು ಕೆಲಸದಲ್ಲಿರುವ ಕಾರಣ ನಾವು ಆರ್ಥಿಕವಾಗಿ ಚೆನ್ನಾಗಿದ್ದರೂ ಸಹ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾಖಲೆಗಳಿಗೂ 1ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.